ಸಾಕ್ಷಿಯನ್ನು 06.07.2022 ರಂದು ಕರೆಸಿ ಪ್ರಮಾಣವಚನ ಮಾಡಿಸಲಾಯಿತು. ಪಿ.ಡಬ್ಲ್ಯೂ-1

ಪಾಟೀ ಸವಾಲುಃ ಪ್ರತಿವಾದಿಪರ ವಕೀಲರಿಂದಃ

1. ಸರ್ವೆ ನಂ. 28/3 ರಲ್ಲಿ ಒಟ್ಟು 2 ಎಕರೆ 20 ಗುಂಟೆ ಇರುತ್ತದೆ. ಮೂಲತಃ ಸರ್ವೆ ನಂ.28/3 ರಲ್ಲಿ ಒಟ್ಟು 1 ಎಕರೆ 24 ಗುಂಟೆ ಇದೆ ಎಂದರೆ ಸರಿ. ಸದರಿ ಸರ್ವೆ ನಂ. ಮೂಲತಃ ಬಿ ಪಿ ಚೌಡಯ್ಯನವರದ್ದು. ಮೂಲತಃ ಸರ್ವೆ ನಂ 28/3 ಡಿ ಸಿ ಚೌಡಯ್ಯನವರದ್ದು ಎಂದರೆ ಸರಿ. ಸದರಿ ಡಿ ಸಿ ಚೌಡಯ್ಯನವರಿಂದ ಜಮೀನನ್ನು ಜಯಲಕ್ಷ್ಮಮ್ಮರವರು ತೆಗೆದುಕೊಂಡಿರುತ್ತಾರೆ. 28.12.1992 ರಲ್ಲಿ ಚೌಡಮ್ಮ ಉ|| ದೊಂದಮ್ಮ ಎಂಬುವರು 32 ಗುಂಟೆಯನ್ನು ಡಿಸಿ ಚೌಡಯ್ಯನವರಿಂದ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿಯವರು ಜಮೀನನ್ನು ತೆಗೆದುಕೊಂಡ ನಂತರ ಸರ್ವೆ ನಂ.28/3 ಎ ಹಾಗೂ 28/3 ಬಿ ಎಂದು ಇಬ್ಭಾಗ ಆಗಿರುತ್ತದೆ ಎಂದರೆ ಸರಿ. ಅದರಲ್ಲಿ 32 ಗುಂಟೆ ಚೌಡಮ್ಮ ಉ|| ದೊಂದಮ್ಮರವರಿಗೆ ಸೇರಿದ್ದು ಎಂದರೆ ಸರಿ. ಡಿ.ಸಿ ಚೌಡಯ್ಯನವರು ದಿಃ 21.11.1994 ರಲ್ಲಿ 32 ಗುಂಟೆ ಜಮೀನನ್ನು ಮೂಗೇಗೌಡ ಚೌಡಯ್ಯನ ಮಗ ಚೌಡಯ್ಯನಿಗೆ ಕೊಟ್ಟಿರುತ್ತಾನೆ ಎಂದರೆ ಸರಿ. ಸದರಿ ಮೂಗೇಗೌಡ ಚೌಡಯ್ಯನ ಮಗ ಚೌಡಯ್ಯ 1 ನೆ ಪ್ರತಿವಾದಿಯ ಅಣ್ಣ ಎಂದರೆ ಸರಿ. ಅಂದಿನಿಂದಲು ಅವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ನಂತರ ಅವರ ಕುಟುಂಬದಲ್ಲಿ ಪಾಲು ಆಗಿ ಈಗ 1 ನೆ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಅದೇ ರೀತಿ ಪಹಣಿ ಮತ್ತು ಖಾತೆ 1 ನೆ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ.

2. ನಾನುಕ್ರಯಕ್ಕೆ ತೆಗೆದುಕೊಂಡಿದ್ದೇನೆ ಎಂದುಹೇಳುವ ಜಮೀನನ್ನು ದೊಂದಮ್ಮನ ಮಗಳು ಭಾಗ್ಯಮ್ಮನಿಂದ ತೆಗೆದುಕೊಂಡಿರುತ್ತೇನೆ. ಉಳಿಕೆ 19 ಗುಂಟೆನ್ನು 2 ಮತ್ತು 3 ನೆ ಪ್ರತಿವಾದಿಗಳ ತಂದೆ ಭೂಮಿಗೌಡ ತೆಗೆದುಕೊಂಡಿರುತ್ತಾರೆ. ಒಟ್ಟು 1 ಎಕರೆ 24 ಗುಂಟೆ ಜಮೀನಿನಲ್ಲಿ 32 ಗುಂಟೆ ಉತ್ತರಕ್ಕೆ ಹಾಗೂ 32 ಗುಂಟೆ ದಕ್ಷಿಣಕ್ಕೆ ಇರುತ್ತದೆ ಎಂದರೆ ಸರಿ. ಉತ್ತರಕ್ಕಿರುವ ಸ್ವತ್ತಿನಲ್ಲಿ 1 ನೆ ಪ್ರತಿವಾದಿ ಸ್ವಾಧಿನದಲ್ಲಿದ್ದಾರೆ ಎಂದರೆ ಸರಿ. ಅದು 32 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ನಾನು 14 ವರ್ಷಗಳ ಹಿಂದೆ ದೊಂದಮ್ಮನ ಮಗಳು ಭಾಗ್ಯಮ್ಮನಿಂದ ಜಮೀನನ್ನು ಕೊಂಡುಕೊಂಡಿರುತ್ತೇವೆ. ಆ ಸಮಯದಲ್ಲಿ ಜಮೀನನ್ನು ಸರ್ವೆ ಸ್ಕೆಚ್ ಮಾಡಿಸಿರುವುದಿಲ್ಲ. ನಮ್ಮ ಹಾಗೂ 2 , 3 ನೆ ಪ್ರತಿವಾದಿಯ ಜಮೀನು ಪೂರ್ವ ಪಶ್ಚಿಮದಲ್ಲಿ ನೇರವಾಗಿ ಇರುತ್ತವೆ ಎಂದರೆ ಸರಿ. ಪಶ್ಚಿಮಕ್ಕೆ 2 ನೆ ಪ್ರತಿವಾದಿಯ

19 ಗುಂಟೆ ಜಮೀನಿದೆ ಎಂದರೆ ಸರಿ. ಪೂರ್ವಕ್ಕೆ ನನಗೆ ಸೇರಿದ ಜಮೀನಿದೆ ಎಂದರೆ ಸರಿ. 2 ಮತ್ತು 3 ನೆ ಪ್ರತಿವಾದಿಯ ಜಮೀನಿನ ಪೂರ್ವದಲ್ಲಿ 8 ವರೆ 9 ಗುಂಟೆ ಇದೆ ಎಂದರೆ ಸರಿ. ನಾನು ಕ್ರಯಕ್ಕೆ ತೆಗೆದುಕೊಂಡಾಗ ಪೂರ್ವಕ್ಕೆ ಹಾಗೂ ದಕ್ಷಿಣಕ್ಕೆ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆಗೆ ನನಗೆ ಸೇರಿದ 3 ವರೆ ಗುಂಟೆ ಜಮೀನು ಹೋಗಿದೆ ಎಂದರೆ ಸರಿಯಲ್ಲ. ಅದೇ ರೀತಿ 2-3 ಪ್ರತಿವಾದಿಯ ಆಸ್ತಿಯ ದಕ್ಷಿಣದಲ್ಲಿ ಹಾಗೂ ನನ್ನ ಜಮೀನಿನ ಪಶ್ಚಿಮದಲ್ಲಿ ರಸ್ತೆಗೆ ಸುಮಾರ 1 ವರೆ ಗುಂಟೆ ಜಮೀನು ಹೋಗಿದೆ ಎಂದರೆ ಸರಿಯಲ್ಲ. ಅದೇ ರೀತಿ 1 ನೆ ಪ್ರತಿವಾದಿಯ ಜಮೀನಿನ ಪೂರ್ವದಲ್ಲಿ 1 ವರೆ ಗುಂಟೆ ಜಮೀನು ರಸ್ತೆಗೆ ಹೋಗಿದೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.

ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ,
ಮಳವಳ್ಳಿ